## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** 2017-18ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆ ಅಡಿಯಲ್ಲಿ ಬೆರಳು ಮುದ್ರೆ ಸಂಗ್ರಹಾಲಯ ಘಟಕಗಳಿಗೆ ಬಿಡುಗಡೆಯಾದ ಅನುದಾನವನ್ನು ಠೇವಣಿ ಇಡುವ ಬಗ್ಗೆ ಆದೇಶ.

**ಓದಲಾಗಿದೆ:** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ 01/ ಸಂಗ್ರಹ / ಎಡಿಜಿಪಿ/ಅಮತ್ತುತಾಂಸೇ/2019-20, ದಿನಾಂಕ 23.03.2020.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಅರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಪತ್ರವನ್ನು ಬರೆದು 2017-18ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆ ಅಡಿಯಲ್ಲಿ ರಾಜ್ಯ ಬೆರಳು ಮುದ್ರೆ ಸಂಗ್ರಹಾಲಯ / ಘಟಕಗಳಿಗೆ ಅವಶ್ಯಕವಿರುವ ಎ.ಎಫ್.ಐ.ಎಸ್ 2.0 ತಂತ್ರಾಂಶಕ್ಕೆ ಪೂರಕವಾದ ಗಣಕಯಂತ್ರ ಹಾಗೂ ಪರಿಕರಗಳನ್ನು ಮತ್ತು ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಲೈವ ಸ್ಕ್ಯಾನರ್ ಉಪಕರಣಗಳ ಖರೀದಿಗೆ ಒಟ್ಟು ರೂ.177.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಕೆಳಕಂಡ ಗಣಕಯಂತ್ರ ಹಾಗೂ ಪರಿಕರಗಳನ್ನು ಖರೀದಿಸುವ ಸಂಬಂಧ ರೂ.88,50,000/- ಗಳಿಗೆ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು ಸದರಿ ಟೆಂಡರ್ ನ The evaluation of Prequalification Bids ನಲ್ಲಿ ಕೇವಲ ಒಂದೇ ಸಂಸ್ಥೆ ಮಾತ್ರ ಅರ್ಹಗೊಂಡಿದ್ದರಿಂದ ಸದರಿ ಟೆಂಡರನ್ನು ರದ್ದುಗೊಳಿಸಿ ಮರುಟೆಂಡರ್ ಹೊರಡಿಸಲಾಗಿರುತ್ತದೆ ಮತ್ತು ಉಳಿದ ಮೊತ್ತ ರೂ. 88,50,000/- ಗಳಿಗೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಲೈವ್ ಸ್ಕ್ಯಾನರ್ ಉಪಕರಣಗಳನ್ನು ಖರೀದಿಸುವ ಸಂಬಂಧ ಕೆಟಿಟಿಪಿ ನಿಯಮಾವಳಿ 4(ಸಿ) ರಡಿಯಲ್ಲಿ ಖರೀದಿಸಲು ಕ್ರಮವಹಿಸಿರುವುದಾಗಿ ತಿಳಿಸಿರುತ್ತಾರೆ.

| Sl. No. | Items required | Qty.in Nos. |
|---|---|---|
| 1. | Workstation(Desktop & 21" Monitor with accessories) | 50 |
| 2. | Flat Bed Scanner | 50 |
| 3. | 1 KVA UPS | 50 |
| 4. | 2 TB External Hard Disk | 50 |
| 5. | Multifunctional Printer (with Xerox & Scanner) | 50 |
| 6. | Four Finger Live scanners | 75 |

ಮುಂದುವರೆದು, 2017-18ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ರೂ. 177.00 ಲಕ್ಷಗಳ ಅನುದಾನವನ್ನು ನಿಗದಿತ ಸಮಯದಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಾಗದ ಕಾರಣ ಕೆ.ಎಸ್.ಪಿ.ಹೆಚ್ ಮತ್ತು ಐ.ಡಿ.ಸಿ.ಎಲ್, ಬೆಂಗಳೂರು ರವರಲ್ಲಿ ಠೇವಣಿ ಇಡಲು ಸರ್ಕಾರದ ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ.

-2

Scanned with CamScanner

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 35 ಇಎಫ್‌ಎಸ್ 2020, ಬೆಂಗಳೂರು,**

**ದಿನಾಂಕ: 24/ಮಾರ್ಚ್/2020ರ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2017-18ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆ ಅಡಿಯಲ್ಲಿ ಬೆರಳು ಮುದ್ರೆ ಸಂಗ್ರಹಾಲಯ ಘಟಕಗಳಿಗೆ ಬಿಡುಗಡೆಯಾದ ಅನುದಾವನ್ನು ರೂ.1,77,00,000/- ಗಳ (ಒಂದು ಕೋಟಿ ಎಪ್ಪತ್ತೇಳು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಕೆ.ಎಸ್.ಪಿ.ಹೆಚ್. & ಐ.ಡಿ.ಸಿ.ಎಲ್ ರವರಲ್ಲಿ ಪೇಯಿಸ್ ರಸೀದಿ ಮೂಲಕ ಖಜಾನೆಯಿಂದ ಡ್ರಾ ಮಾಡಿ ಠೇವಣಿ ಇಡಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಅ.ಮು.ಕಾ.ರವರ ಆಇ 1063 ಅ.ಮು.ಕಾ/2020, ದಿನಾಂಕ: 24.03.2020ರಲ್ಲಿ ನೀಡಿರುವ ಅನುಮೋದನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/3/2020

[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

(6)
6/5/2020
ಹೊರಡಿಸಿದೆ
ಒಳಾಡಳಿತ ಇಲಾಖೆ
ಸ್ವೀಕೃತಿ ಮತ್ತು ರವಾನೆ ಶಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
5. ಪೊಲೀಸ್ ಅಧೀಕ್ಷಕರು, ಬೆರಳು ಮುದ್ರೆ, ಸಂಗ್ರಹಾಲಯ, ಬೆಂಗಳೂರು. 24/3 Mahaleshwar Hegde DySP
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned with CamScanner